# ಆಹಾ ಸುದ್ದಿ!

★ ಸಸಿತೋಟ



ದೆಹಲಿಯಲ್ಲಿ ಗಣರಾಜ್ಯೋತ್ಸವದಲ್ಲಿ ಮಿಲಿಟರಿ ಪ್ರದರ್ಶನ ನಡೆದಂತೆ ಇಂಡೋನೇಷ್ಯಾದಲ್ಲಿ ಕೂಡ ಮಿಲಿಟರಿ ಪ್ರದರ್ಶನ ನಡೆಯಿತಂತೆ. ವಿಶೇಷವೆಂದರೆ ಮಿಲಿಟರಿ ಬಾಂಧವ್ಯಕ್ಕೆ ಅಮೆರಿಕ ಆಸಕ್ತಿ ತೋರಿಸಿರುವ ಸಂದರ್ಭಕ್ಕೆ ಈ ಪ್ರದರ್ಶನವಂತೆ. ಆದರೆ ಅಲ್ಲಿಯ ಸೈನಿಕರು ವಿಷದ ಹಾವಿನ ರಕ್ತ ಕುಡಿದು ಶಕ್ತಿ ಪ್ರದರ್ಶನ ಮಾಡಿದರಂತೆ. ಅಮೆರಿಕವೆಂದರೆ ವಿಷವೇ? ಅಮೆರಿಕದ ಅಧ್ಯಕ್ಷರು ಯಾವ ರೀತಿ ಅರ್ಥ ಮಾಡಿಕೊಂಡು ಶರಾ ಹಾಕಿದರೋ!



ಇಂಡೋನೇಷ್ಯಾದಲ್ಲಿ ಛಾಯಾಚಿತ್ರಗ್ರಾಹಕನ ಕ್ಯಾಮೆರಾಗೆ ಸೆರೆ ಸಿಕ್ಕ ದೃಶ್ಯವಿದು. ಮಂದ ನಡಿಗೆಯವ ಇನ್ನೊಬ್ಬ ನಿಧಾನ ನಡಿಗೆಯವನ ಮೇಲೆ ಸವಾರಿ ಹೊರಟರೆ ಸ್ಲೋ ಮೋಷನ್ ಚಿತ್ರಕ್ಕೆ ತಂತ್ರಜ್ಞಾನ ಅಳವಡಿಸಬೇಕಾದ ಕಷ್ಟವೇ ಇಲ್ಲ.

ಆಫ್ರಿಕಾದ ಪುಟ್ಟ ರಾಷ್ಟ್ರ ಇರಿಟ್ರಿಯಾದಲ್ಲಿ ವಿಚಿತ್ರ ಕಾನೂನು ಜಾರಿಯಾಗಿದೆ. ಎರಡು ಮದುವೆಯಾಗದ ಪುರುಷನಿಗೆ ಜೈಲು ಶಿಕ್ಷೆಯಂತೆ. ಹಿಂದೆ ನಡೆದ ಯುದ್ಧದಲ್ಲಿ ಅಪಾರ ಸಂಖ್ಯೆಯಲ್ಲಿ ಪುರುಷರು ಮರಣ ಹೊಂದಿದ್ದು, ಹೆಚ್ಚಿನ ಸಂಖ್ಯೆಯಲ್ಲಿರುವ ಮಹಿಳೆಯರಿಗೆ ವಿವಾಹ ಭಾಗ್ಯ ನೀಡಲು ಈ ಕಾನೂನಂತೆ. ಏನೇ ಇರಲಿ, ಒಂದು ಸಂಸಾರಕ್ಕೇ ಸೋತು ಸುಣ್ಣವಾದವರು, ಇನ್ನೊಂದೆಂದರೆ...!

ಶ್ವೇತಭವನದಲ್ಲಿಡಲು ಖ್ಯಾತ ಕಲಾವಿದ ವ್ಯಾನ್ ಗೋ ಕಲಾಕೃತಿಯನ್ನು ಬಾಡಿಗೆಗೆ ನೀಡಲು ನಿರಾಕರಿಸಿರುವ ಅಮೆರಿಕದ ವಸ್ತು ಸಂಗ್ರಹಾಲಯದ ಕ್ಯುರೇಟರ್, ಅದಕ್ಕೆ ಬದಲಾಗಿ ಚಿನ್ನದ ಶೌಚಾಲಯ ನೀಡುವುದಾಗಿ ಹೇಳಿದ್ದಾರಂತೆ. ಚಿನ್ನದ್ದಾದರೇನು, ಶೌಚಾಲಯ ಶೌಚಾಲಯವೇ! ಅಮೆರಿಕದ ಅಧ್ಯಕ್ಷರು ಮೇಲೆ ಗೋಡೆ ನೋಡುವ ಬದಲು ಗೋಡೆಯ ಕೆಳಗೆ ನೋಡಿ ತೃಪ್ತಿಪಡಬಹುದು.



ತಂತ್ರಜ್ಞಾನವನ್ನು ಕಣ್ಮುಚ್ಚಿ ಅನುಸರಿಸಿದರೆ ಏನಾಗುತ್ತದೆ ಎಂಬುದಕ್ಕೆ ಅಮೆರಿಕದ ಬರ್ಲಿಂಗ್ಟನ್‌ನಲ್ಲಿ ಸಂಭವಿಸಿದ ಈ ಅಪಘಾತ ಸಾಕ್ಷಿ. ಈ ಪ್ರದೇಶಕ್ಕೆ ಅಪರಿಚಿತರಾದ ಮೂವರು ಕಾರಿನಲ್ಲಿ ಜಿಪಿಎಸ್ ಹಾಕಿಕೊಂಡು ಚಾಲನೆ ಮಾಡುತ್ತಿದ್ದು, ಜಿಪಿಎಸ್ 'ನೇರ ಹೋಗಿ' ಎಂದಿದ್ದಕ್ಕೆ ಸೀದಾ ಹೆಪ್ಪುಗಟ್ಟಿದ ಸರೋವರಕ್ಕೆ ನುಗ್ಗಿಸಿದರಂತೆ. ಪೊಲೀಸರು ಈ ಮೂವರ ಮೇಲೆ ಪ್ರಕರಣ ದಾಖಲಿಸಬೇಕೋ ಅಥವಾ ಗೂಗ್ಲ್ ಆ್ಯಪ್ ಮೇಲೋ ಎಂದು ಗೊಂದಲದಲ್ಲಿದ್ದಾರಂತೆ.



ಸ್ಪೇನಿನಲ್ಲಿ ಇತ್ತೀಚೆಗೆ ನಡೆದ ಹಬ್ಬವೊಂದರಲ್ಲಿ ಕುದುರೆಗಳಿಗೆ ಕಿಚ್ಚು ಹಾಯಿಸಿದ ದೃಶ್ಯ. ನಮ್ಮಲ್ಲಿ ಮಕರ ಸಂಕ್ರಾಂತಿ ಆಚರಣೆ ಸಂದರ್ಭದಲ್ಲೇ ಅಲ್ಲಿಯೂ ಹಬ್ಬದ ಆಚರಣೆ ನಡೆದಿದ್ದು, ಇಲ್ಲಿ ದನಗಳಿಗೆ ಕಿಚ್ಚು ಹಾಯಿಸಿದಂತೆ ಅಲ್ಲಿ ಕುದುರೆಗಳಿಗೆ ಹಾಯಿಸಲಾಗುತ್ತದಂತೆ. ದೇಶ, ಭಾಷೆ ಯಾವುದಾದರೇನು, ಆಚರಣೆ ಒಂದೇ! ಪ್ರಾಣಿ ಮಾತ್ರ ಬೇರೆ.